# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 738 |
| ಸದಸ್ಯರ ಹೆಸರು | : | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 26-12-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಯೋಜನೆಯಡಿ ಎಷ್ಟು ಯುನಿಟ್ ವಿದ್ಯುತ್‌ನ್ನು ಉಚಿತವಾಗಿ ನೀಡಲಾಗುತ್ತಿದೆ ನಿಗದಿತ ಯುನಿಟ್‌ಗಿಂತ ಹೆಚ್ಚು ವಿದ್ಯುತ್ ಬಳಸಿದಲ್ಲಿ ಹೆಚ್ಚುವರಿ ಯುನಿಟ್‌ಗೆ ಎಷ್ಟು ದರವನ್ನು ಯಾವ ಆಧಾರದ ಮೇಲೆ ನಿಗದಿಪಡಿಸಲಾಗುವುದು; (ವಿವರ ನೀಡುವುದು) | ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇಎನ್ 12 PSR 2017 ದಿನಾಂಕ: 29.05.2017 ಅನ್ವಯ ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಸ್ಥಾವರಗಳಿಗೆ ಮಾಸಿಕ 40 ಯೂನಿಟ್‌ಗಳಷ್ಟು ಉಚಿತ ವಿದ್ಯುತ್ ನೀಡಲಾಗುತ್ತಿದೆ.<br>ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಗ್ರಾಹಕರು 40 ಯೂನಿಟ್‌ಗಳಿಗಿಂತ (40 ಯೂನಿಟ್‌ಗಳು ಸೇರಿದಂತೆ) ಹೆಚ್ಚಾಗಿ ಬಳಕೆ ಮಾಡಿದಲ್ಲಿ ಅಂತಹ ಸ್ಥಾವರಗಳಿಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಜಕಾತಿ ಆದೇಶದನ್ವಯ ಎಲ್‌ಟಿ-2(ಎ) ಪ್ರವರ್ಗದ ಜಕಾತಿ ದರದಲ್ಲಿ ವಿದ್ಯುತ್ ಶುಲ್ಕ ಪಾವತಿಸಬೇಕಾಗಿರುತ್ತದೆ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಎಲ್.ಟಿ.2(ಎ) ಜಕಾತಿ ದರದ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಆ) | ಈ ಯೋಜನೆಗಳಡಿ ನಿಗದಿತ ಯುನಿಟ್‌ಗಿಂತ ಹೆಚ್ಚು ವಿದ್ಯುತ್ ಬಳಸಿ ವಿದ್ಯುತ್ ದರ ಸಂದಾಯ ಮಾಡದ ಫಲಾನುಭವಿಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇಂತಹ ಪ್ರಕರಣಗಳನ್ನು ಇತ್ಯರ್ಥಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಸರ್ಕಾರವು ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳಿಗೆ 40 ಯೂನಿಟ್‌ಗಳ ವಿದ್ಯುತ್ ಸರಬರಾಜಿಗಾಗಿ ಸಹಾಯಧನ ಬಿಡುಗಡೆ ಮಾಡುತ್ತಿರುವುದರಿಂದ ಮಾಸಿಕ 40 ಯೂನಿಟ್‌ಗಳವರೆಗೆ ವಿದ್ಯುತ್ ಬಳಸುವ ಗ್ರಾಹಕರ ಸ್ಥಾವರಕ್ಕೆ ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ನಿಲುಗಡೆಗೊಳಿಸುತ್ತಿರುವುದಿಲ್ಲ. ಹಾಗೂ ಮಾಸಿಕ 40 ಯೂನಿಟ್‌ಗಿಂತ ಹೆಚ್ಚು ಬಳಸಿದ ಎಲ್ಲಾ ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಗ್ರಾಹಕರಿಗೆ, ಬಳಸಿದ ಎಲ್ಲಾ ಯೂನಿಟ್‌ಗಳಿಗೆ (40 ಯೂನಿಟ್‌ಗಳನ್ನು ಒಳಗೊಂಡು) ಎಲ್‌ಟಿ-2(ಎ) ಪ್ರವರ್ಗದಡಿಯಲ್ಲಿ ವಿದ್ಯುತ್ ಶುಲ್ಕ ಪಾವತಿಸಲು ಬಿಲ್ಲು ನೀಡಲಾಗುತ್ತಿದ್ದು ಈ ವಿದ್ಯುತ್ ಶುಲ್ಕ ಪಾವತಿಸಲು ವಿಫಲರಾದಂತಹ ಗ್ರಾಹಕರ ಸ್ಥಾವರಗಳಿಗೆ ಮಾತ್ರ ವಿದ್ಯುತ್ ನಿಲುಗಡೆಯಂತಹ ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ) | ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ಸಂಪರ್ಕ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; ನಿಗದಿತ ಮಿತಿಗಿಂತ ಹೆಚ್ಚು ವಿದ್ಯುತ್ ಬಳಸಿ ವಿದ್ಯುತ್ ದರ ಸಂದಾಯ ಮಾಡದ ಫಲಾನುಭವಿಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸಿರುವ ಪ್ರಕರಣಗಳೆಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು) | ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಭಾಗ್ಯಜ್ಯೋತಿ ಮತ್ತು ಕುಟೀರಜ್ಯೋತಿ ಸಂಪರ್ಕ ಪಡೆದ ಫಲಾನುಭವಿಗಳ ವಿವರಗಳು ಹಾಗೂ ನಿಗದಿಗಿಂತ ಹೆಚ್ಚು ವಿದ್ಯುತ್ ಬಳಸಿ ವಿದ್ಯುತ್ ದರ ಸಂದಾಯ ಮಾಡದ ಫಲಾನುಭವಿಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸಿರುವ ವಿವರಗಳು ಈ ಕೆಳಗಿನಂತಿವೆ. |

(ನವೆಂಬರ್ 2022ರ ಅಂತ್ಯಕ್ಕೆ)

| ಜಿಲ್ಲೆ | ತಾಲ್ಲೂಕು | ವಿದ್ಯುತ್ ಸಂಪರ್ಕ ಪಡೆದ ಫಲಾನುಭವಿಗಳ ಸಂಖ್ಯೆ | ವಿದ್ಯುತ್ ಸಂಪರ್ಕ ಕಡಿತ ಗೊಳಿಸಿದ ಸ್ಥಾವರಗಳ ಸಂಖ್ಯೆ |
|---|---|---|---|
| ರಾಮನಗರ | ಚನ್ನಪಟ್ಟಣ | 18703 | 426 |
| | ಕನಕಪುರ | 37778 | 1526 |
| | ಮಾಗಡಿ | 18307 | 859 |
| | ರಾಮನಗರ | 7801 | 361 |
| ಬೆಂಗಳೂರು ಗ್ರಾಮಾಂತರ | ಆನೇಕಲ್ | 12426 | 1203 |
| | ದೇವನಹಳ್ಳಿ | 10775 | 4496 |
| | ದೊಡ್ಡಬಳ್ಳಾಪುರ | 19230 | 1145 |
| | ಹೊಸಕೋಟೆ | 13815 | 1510 |
| | ನೆಲಮಂಗಲ | 12588 | 4131 |
| | **ಒಟ್ಟು** | **151423** | **15657** |

ಸಂಖ್ಯೆ: ಎನರ್ಜಿ 278 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್. ರವಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 738ಕ್ಕೆ ಅನುಬಂಧ

### ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಎಲ್.ಟಿ.2(ಎ) ಜಕಾತಿ ದರದ ವಿವರಗಳು :-

| ಎಲ್.ಟಿ.2ಎ (i)-ನಗರ ಪ್ರದೇಶಗಳಿಗೆ ಒಳಪಡುವ ಸ್ಥಾವರಗಳಿಗೆ ಅನ್ವಯ | |
|---|---|
| ನಿಗದಿತ ಶುಲ್ಕ | ರೂ.ಗಳಲ್ಲಿ |
| ಮೊದಲ ಕಿ.ವ್ಯಾ.ಗೆ | 100.00 |
| 50 ಕಿ.ವ್ಯಾ. ಸೇರಿದಂತೆ ಹಾಗೂ 50 ಕಿ.ವ್ಯಾ.ವರೆಗಿನ ಪ್ರತಿ ಹೆಚ್ಚುವರಿ ಕಿ.ವ್ಯಾ.ಗೆ | 110.00 |
| 50 ಕಿ.ವ್ಯಾ.ಮೀರಿದ ಪ್ರತಿ ಹೆಚ್ಚುವರಿ ಕಿ.ವ್ಯಾ.ಗೆ | 175.00 |
| ವಿದ್ಯುತ್ ಬಳಕೆ ಶುಲ್ಕ: | |
| ಬಳಸಿದ ಮೊದಲ 50 ಯೂನಿಟ್ಟುಗಳವರೆಗೆ, ಪ್ರತಿ ಯೂನಿಟ್ಟಿಗೆ | 4.15 |
| 51 ಯೂನಿಟ್ಟುಗಳಿಂದ 100 ಯೂನಿಟ್ಟುಗಳವರೆಗೆ, ಪ್ರತಿ ಯೂನಿಟ್ಟಿಗೆ | 5.60 |
| 101 ಯೂನಿಟ್ಟುಗಳಿಂದ 200 ಯೂನಿಟ್ಟುಗಳವರೆಗೆ, ಪ್ರತಿ ಯೂನಿಟ್ಟಿಗೆ | 7.15 |
| 200 ಯೂನಿಟ್ಟುಗಳನ್ನು ಮೀರಿ ಬಳಸಿದ ಪ್ರತಿ ಯೂನಿಟ್ಟಿಗೆ | 8.20 |
| ಎಲ್.ಟಿ.2ಎ (ii)-ಗ್ರಾಮೀಣ ಪ್ರದೇಶಗಳಿಗೆ ಒಳಪಡುವ ಸ್ಥಾವರಗಳಿಗೆ ಅನ್ವಯ | |
| ನಿಗದಿತ ಶುಲ್ಕ | ರೂ.ಗಳಲ್ಲಿ |
| ಮೊದಲ ಕಿ.ವ್ಯಾ.ಗೆ | 85.00 |
| 50 ಕಿ.ವ್ಯಾ. ಸೇರಿದಂತೆ ಹಾಗೂ 50 ಕಿ.ವ್ಯಾ.ವರೆಗಿನ ಪ್ರತಿ ಹೆಚ್ಚುವರಿ ಕಿ.ವ್ಯಾ.ಗೆ | 100.00 |
| 50 ಕಿ.ವ್ಯಾ. ಮೀರಿದ ಪ್ರತಿ ಹೆಚ್ಚುವರಿ ಕಿ.ವ್ಯಾ.ಗೆ | 160.00 |
| ವಿದ್ಯುತ್ ಬಳಕೆ ಶುಲ್ಕ: | |
| ಬಳಸಿದ ಮೊದಲ 50 ಯೂನಿಟ್ಟುಗಳವರೆಗೆ, ಪ್ರತಿ ಯೂನಿಟ್ಟಿಗೆ | 4.05 |
| 51 ಯೂನಿಟ್ಟುಗಳಿಂದ 100 ಯೂನಿಟ್ಟುಗಳವರೆಗೆ, ಪ್ರತಿ ಯೂನಿಟ್ಟಿಗೆ | 5.30 |
| 101 ಯೂನಿಟ್ಟುಗಳಿಂದ 200 ಯೂನಿಟ್ಟುಗಳವರೆಗೆ, ಪ್ರತಿ ಯೂನಿಟ್ಟಿಗೆ | 6.85 |
| 200 ಯೂನಿಟ್ಟುಗಳನ್ನು ಮೀರಿ ಬಳಸಿದ ಪ್ರತಿ ಯೂನಿಟ್ಟಿಗೆ | 7.70 |